ಅಸಲು ದಾವಾ ನಂ. 17/2021 ಡಿಡಬ್ಲೂ : 2

ದಿನಾಂಕಃ 14-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

17. ಓ ಎಸ್ ನಂ. 135/2011 ನ್ನು ನಾನೇ ದಾಖಲಿಸಿದ್ದೆ . ದಾವೆ ನಿಖಾಲೆಯಾದ ನಂತರ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನ್ಯಾಯಾಲಯದಿಂದ ಪಡೆದುಕೊಂಡಿಲ್ಲ . ಓ ಎಸ್ ನಂ. 135/2011 ಕ್ಕೆ ಈ ಕೇಸಿನ ವಾದಿಯರು ಪಕ್ಷಗಾರರಾಗಿರಲಿಲ್ಲ ಎಂದರೆ ಸಾಕ್ಷಿ ಅಕುಮೆ ನಾತೆಯಿಂದ ಯೋಗರಾಜ ದತ್ತಾತ್ರೇಯ ಭಟ್ ಪಕ್ಷಗಾರರಾಗಿದ್ದರು ಎಂದು ನುಡಿದಿರುತ್ತಾರೆ . ಅವರು ಸದರಿ ಕೇಸಿನಲ್ಲಿ ವಾದಿಯಾಗಿದ್ದರೋ ಅಥವಾ ಪ್ರತಿವಾದಿಯಾಗಿದ್ದರೋ ನೆನಪಿಲ್ಲ . ಆ ದಾವೆಯನ್ನು ಯಾವ ಕಾರಣಕ್ಕೆ ವಾಪಸ್ಸು ಪಡೆದುಕೊಂಡಿರುತ್ತೇನೆ ನೆನಪಿಲ್ಲ . ಈ ಪ್ರಕರಣ ದಾಖಲಾದ ನಂತರ ಓ ಎಸ್ ನಂ 135/2011 ರ ದಾಖಲಾತಿಗಳನ್ನು ನಮ್ಮ ವಕೀಲರಿಗೆ ನಾನು ಕೊಟ್ಟಿಲ್ಲ , ಆದರೆ ಅವರೇ ದಾಖಲಾತಿಗಳನ್ನು ತೆಗೆದುಕೊಂಡಿರುತ್ತಾರೆ. ಪ್ರಕರಣವನ್ನು ಹಿಂದಕ್ಕೆ ಪಡೆದಾಗ ನಾಗೇಶ ಸೂರಿ ಎಂಬವರ ಜೊತೆ ಮಾತುಕತೆ ಬಾಕಿ ಇತ್ತು. ಈ ಕೇಸಿನ ದಾವಾ ಸ್ವತ್ತಿನ ಲಗ್ತು ಯಾವ ಭಾಗದಲ್ಲಿ ನಾಗೇಶ ಸೂರಿಯವರ ಫ್ರಾಪ್ರರ್ಟಿ ಇತ್ತು ಎಂದರೆ ಸಾಕ್ಷಿ ಅವರು ಅತೀಕ್ರಮಣ ಮಾಡಿದ್ದರು ಎಂದು ನುಡಿದಿರುತ್ತಾರೆ . ಪ್ರತಿಯೊಂದು ಆಸ್ತಿಯನ್ನು ಮಾರಾಟ ಮಾಡಿದ ಹಣವನ್ನು ಎಲ್ಲರ ಉಪಸ್ಥಿತಿಯಲ್ಲಿ ವಾದಿಯರ ತಾಯಿಗೆ ಕೊಟ್ಟಿರುತ್ತೇನೆ .

18. ನಿಪಿ-6 ಕ್ರಯ ಪತ್ರದಲ್ಲಿ ದಿಲೀಪ ಉಮಾ ಮಹೇಶ್ವರ ನಾಯ್ಕ ರವರಿಗೆ ಆಸ್ತಿಯನ್ನು ಮಾರಾಟ ಮಾಡಿದಾಗ 4,21,000/- ರೂಪಾಯಿಯನ್ನು ದಿಃ 10-04-2015 ರಂದು ಚೆಕ್ ಮುಖಾಂತರ ನನಗೆ ನೀಡಿದ್ದಾರೆ ಎಂದು ಸದರಿ ದಾಖಲಾತಿಯಲ್ಲಿ ನಮೂದಿದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ಸಾಕ್ಷಿಗೆ ನಿಪಿ-6 ಮೂರನೇ ಪುಟದ ಮೊದಲನೇ ಪ್ಯಾರಾದಲ್ಲಿ ಬರೆದಿರುವ ಅಂಶಗಳನ್ನು

ತೋರಿಸಲಾಗಿ ಅದು ಸರಿ ಇದೆ ಎಂದು ನುಡಿದಿರುತ್ತಾರೆ . ಈ ಹಣವನ್ನು ನನ್ನ ಯಾವ ಖಾತೆಗೆ ಜಮಾ ಪಡಿಸಿದ್ದಾರೆ ನೆನಪಿಲ್ಲ. ನನ್ನ ಹೆಸರಿನಲ್ಲಿ ಎರಡು ಬ್ಯಾಂಕ್ ಖಾತೆ ಇದೆ. ನಾನು ಹಾಜರು ಪಡಿಸಿದ ಗೋಕರ್ಣ ಶಾಖೆಯ ಕೆನರಾ ಬ್ಯಾಂಕಿನ ಸ್ಟೇಟ್ ಮೆಂಟ್ ಅಕೌಂಟ್ ನಲ್ಲಿ ಸದರಿ ಹಣ ಜಮಾ ಆಗಿಲ್ಲ. ಆ ಹಣ ಯಾವ ಖಾತೆಗೆ ಜಮಾ ಆಗಿದೆ ನೆನಪಿಲ್ಲ . ಕೆನರಾ ಬ್ಯಾಂಕಿನ ಖಾತೆಯನ್ನು ಹೊರತು ಪಡಿಸಿ ಬೇರೆ ಬ್ಯಾಂಕಿನ ಖಾತೆಯಲ್ಲಿ ಹಣ ಜಮಾ ಆಗಿರಬಹುದು ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ. ಕೆನರಾ ಬ್ಯಾಂಕ್ ನ್ನು ಹೊರತು ಪಡಿಸಿ ಕರ್ನಾಟಕ ಬ್ಯಾಂಕಿನಲ್ಲಿ ನನ್ನ ಖಾತೆ ಇದೆ . ಯಾವ ಕ್ರಯದಲ್ಲಿ ಐದು ಖರೀದಿದಾರರು ಚೆಕ್ ನ ಮುಖಾಂತರ ಹಣವನ್ನು ನೀಡಿದ್ದಾರೆ ನೆನಪಿಲ್ಲ . ನಾನು ಅಕೌಂಟ್ ಮೂಲಕ ಹಣವನ್ನು ವರ್ಗಾಯಿಸುವ ಪದ್ಧತಿಯನ್ನು ಸ್ವತ್ತುಗಳನ್ನು ಮಾರಾಟ ಮಾಡುವ ಪೂರ್ವದಿಂದಲೂ ಇಟ್ಟುಕೊಂಡಿದ್ದೇನೆ ಎಂದರೆ ಸರಿ . ನಿಡಿ–54 ಬ್ಯಾಂಕ್ ಸ್ಟೇಟ್ ಮೆಂಟ್ ಪ್ರಕಾರ ನಾನು ಇತರೆ ಬೇರೆಯವರಿಗೆ ಹಣವನ್ನು ವರ್ಗಾಯಿಸುವುದು ಕಂಡು ಬರುತ್ತದೆ ಎಂದರೆ ಸರಿ . ನಾನು ತೆಗೆದುಕೊಂಡಿರುವ ಮೊತ್ತವನ್ನು ವಾದಿಯರಿಂದ ಅವರ ಅಕೌಂಟ್ ನಂಬರನ್ನು ತೆಗೆದುಕೊಂಡು ಅವರ ಅಕೌಂಟ್ ಗೆ ಹಣವನ್ನು ವರ್ಗಾವಣೆ ಮಾಡಿಲ್ಲ , ಅವರ ತಾಯಿಗೆ ಕ್ಯಾಶ್ ರೂಪದಲ್ಲಿ ಕೊಟ್ಟಿರುತ್ತೇನೆ. ನಿಡಿ–54 ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಎರಡು ಪ್ರೊಪರ್ಟಿ ಹಣವನ್ನು 1 ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ ಬಗ್ಗೆ ಹಾಜರು ಪಡಿಸಿರುತ್ತೇನೆ. ನಾಗೇಶ ಸೂರಿ ಮತ್ತು ಹಾಗೂ ಭಾಗ್ಯರೇಖಾ ಅಡಿಮೂಳೆರವರು ಖರೀದಿಸಿದ ಪ್ರೊಪರ್ಟಿಯ ಹಣದ ಬಗ್ಗೆ ಸದರಿ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದೇನೆ . ವಾದಿಯರ ತಾಯಿಯ ಮರಣದ ನಂತರ 1 ನೇ ಪ್ರತಿವಾದಿಗೆ ಅಕುಮೆ ನಾತೆಯಿಂದ ವಾದಿಯರ ಒಪ್ಪಿಗೆ ಪಡೆದು ಕೊಟ್ಟಿರುತ್ತೇನೆ. ಭಾಗ್ಯರೇಖಾ ಗಣೇಶ ಅಡಿಮೂಳೆ ನನ್ನ ಹೆಂಡತಿ ಎಂದರೆ ಸರಿ . ಸದರಿ ಹಣವನ್ನು ಭಾಗ್ಯರೇಖಾರವರು ಸ್ವಲ್ಪ ಕೈ ಸಾಲ ಪಡೆದ ಹಣ ಹಾಗೂ ಸ್ವಲ್ಪ ಅವರ ತಂದೆಯಿಂದ ಪಡೆದ ಹಣ ಹಾಗೂ ಅವರು ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ , ಅದರಿಂದ ಬಂದಿರುವ ಹಣವನ್ನು ಸ್ವತ್ತು ಖರೀದಿಗೆ ಕೊಟ್ಟಿರುತ್ತಾರೆ . ಕೈ ಸಾಲವನ್ನು ಯಾರಿಂದ ತೆಗೆದುಕೊಂಡಿದ್ದರು ನೆನಪಿಲ್ಲ . ಸದರಿ ಹಣವನ್ನು ಯಾವ

ದಿನಾಂಕದಂದು ಕೊಟ್ಟಿದ್ದರು ನೆನಪಿಲ್ಲ. ಸದರಿ ಹಣವನ್ನು ಕ್ರಯ ದಸ್ತಾವೇಜಿನ ಸಮಯದಲ್ಲಿ ನೀಡಿದ್ದರಾ ನೆನಪಿಲ್ಲ. ಕ್ರಯ ದಸ್ತಾವೇಜಿನ ಪೂರ್ವದಲ್ಲಿ ನೀಡಿದ್ದರಾ ನೆನಪಿಲ್ಲ. ಭಾಗ್ಯರೇಖಾರವರಿಗೆ ಹಣವನ್ನು ನೀಡಿದ ನಂತರ ಎಷ್ಟು ಹಣವನ್ನು 1 ನೇ ಪ್ರತಿವಾದಿಯ ಖಾತೆಗೆ ಎಷ್ಟು ಹಣವನ್ನು ಹಾಕಿದ್ದರು ನೆನಪಿಲ್ಲ. ಸಾಕ್ಷಿಗೆ ನಿಡಿ-54 ದಾಖಲಾತಿಯನ್ನು ತೋರಿಸಲಾಗಿ ಎಷ್ಟು ಹಣವನ್ನು ಹಾಕಿದ್ದೆ ನನಗೆ ಐಡಿಯಾ ಇಲ್ಲ , ದಾಖಲಾತಿಯಲ್ಲಿ ನಮೂದಿದೆ ಎಂದು ನುಡಿದಿರುತ್ತಾರೆ . ನಾಗೇಶ ಸೂರಿಯವರಿಂದ ಹಣವನ್ನು ಪಡೆದ ನಂತರ ಎಷ್ಟು ಹಣವನ್ನು 1 ನೇ ಪ್ರತಿವಾದಿಯ ಖಾತೆಗೆ ಹಾಕಿರುತ್ತೇನೆ ನೆನಪಿಲ್ಲ. ಅದು ನಿಡಿ-54 ರಲ್ಲಿ ಇದೆ . ನಾಗೇಶ ಸೂರಿ ಹಾಗೂ ಭಾಗ್ಯರೇಖಾರವರಿಗೆ ಸ್ವತ್ತನ್ನು ಮಾರಾಟ ಮಾಡಿದ ನಂತರ ಅವರು ನೀಡಿದ ಹಣವನ್ನು ನಾನು 1 ನೇ ಪ್ರತಿವಾದಿ ಖಾತೆಗೆ ಹಾಕಿರುತ್ತೇನೆ. ಖರೀದಿಸಿದ ಸಂಪೂರ್ಣ ಹಣವನ್ನು ಅವರ ಖಾತೆಗೆ ಹಾಕಿರುತ್ತೇನೆ. ಖರೀದಿ ದಸ್ತಾವೇಜಿನ ಸಮಯದಲ್ಲಿ ಖರೀದಿದಾರರು ನೀಡಿದ ಹಣವನ್ನು ವಾದಿಯರ ಹಕ್ಕಿನ ಅಂಶದ ಪಾಲನ್ನು 1 ನೇ ಪ್ರತಿವಾದಿಯ ಖಾತೆಗೆ ಹಾಕಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಕೊಟ್ಟಾಗ ನಾನು ವಾದಿಯರಿಂದ ಹಣ ಸಂದಾಯವಾದ ಬಗ್ಗೆ ಹಣ ಸಂದಾಯ ರಸೀದಿಯನ್ನು ಪಡೆದುಕೊಂಡಿಲ್ಲ. ನಾನು ಹಾಜರು ಪಡಿಸಿದ ಪೋಟೋಗಳು ಸರ್ವೆ ನಂ . 1678, 1679, 1289 ಸಂಬಂಧಪಟ್ಟವು ಆಗಿರುತ್ತವೆ . ಸದರಿ ಸ್ವತ್ತಿನಲ್ಲಿ ಪೋಟೋದಲ್ಲಿ ಕಂಡು ಬಂದ ಇಮಾರತ್ತುಗಳು ನಾಗಪ್ಪ ಗೋವಿಂದ ಗೌಡಾ , ಸುಕ್ರು ಕಾರೇ ಗೌಡಾ , ವೆಂಟ್ರಮಣ ಕಾರೇ ಗೌಡಾ , ಗಣಪತಿ ಮಾಣೇಶ್ವರ ಗೌಡಾ , ದಿಲೀಪ ನಾಯ್ಕ , ಶಂಕರ ನಾರಾಯಣ ಜೋಶಿ ವಗೈರೆ ಕಟ್ಟಿರುತ್ತಾರೆ. ಇವು ದಾವ ಸ್ವತ್ತಿನಲ್ಲಿ ಇರುವಂತಹ ಇಮಾರತ್ತುಗಳು ಅಲ್ಲ ಎಂದರೆ ಸರಿಯಲ್ಲ . ನಾನು ಜಿಪಿಎ ಪಡೆದ ನಂತರ ಇಂತಹ ಇಮಾರತ್ತುಗಳನ್ನು ಅತೀಕ್ರಮಣವಾಗಿ ಕಟ್ಟಿದ್ದಾರೆ ಎಂದು ಪಂಚಾಯತಿಯವರಿಗೆ ದೂರನ್ನು ನೀಡಿರುವ ಬಗ್ಗೆ ನೆನಪಿಲ್ಲ. ಓ ಎಸ್ ನಂ. 135/2011 ರಲ್ಲಿ ಈಗ ಹೇಳಿದ ಎಲ್ಲಾ ಪ್ರತಿವಾದಿಯರನ್ನಾಗಿ ಸೇರಿಸಿದ ಬಗ್ಗೆ ನೆನಪಿಲ್ಲ.

19. ವಿಶ್ವೇಶ್ವರ ಮಾಣೇಶ್ವರ ಭಟ್ ಇವರ ಮೊಕ್ತಾರನಾಮೆಯನ್ನು ಕುಮಟಾದಲ್ಲಿ ಮಾಡಲಾಗಿತ್ತು . ಕುಮಟಾದಲ್ಲಿ ಎಲ್ಲಿ ಮಾಡಲಾಗಿತ್ತು ನೆನಪಿಲ್ಲ. ನೋಟರಿ ಆಫೀಸ್ ನಲ್ಲಿ ಮಾಡಲಾಗಿತ್ತು . ನೋಟರಿಯವರ ಹೆಸರು ನೆನಪಿಲ್ಲ. ಶಾರದಾ ವಿಶ್ವೇಶ್ವರ ಭಟ್ ಗೋಪಿಯವರು ನೀಡಿದ ಮೊಕ್ತಾರನಾಮೆಯನ್ನು ಕುಮಟಾ ನೋಟರಿ ಆಫೀಸ್ ನಲ್ಲಿ ಮಾಡಲಾಗಿತ್ತು. ವಕೀಲರಾದ ಶ್ರೀ ಪಿ ಜಿ ಹೆಗಡೆಯವರ ಆಫೀಸ್ ಇರಬೇಕು ನೆನಪಿಲ್ಲ. ಅವರು ನೀಡಿರುವ ಮೊಕ್ತಾರನಾಮೆಯಲ್ಲಿ 9 ನೇ ಪ್ಯಾರಾದಲ್ಲಿ ಸದರ ಸ್ಥಳದಲ್ಲಿ ಈಗಿರುವ ಇಮಾತ್ತುಗಳನ್ನು ದುರಸ್ತಿ ಪಡಿಸಿ ...................................... ಖುಲ್ಲಾ ಕಬ್ಜಾ ಪಡೆಯಲು ಅಧಿಕಾರ ನೀಡಿರುತ್ತೇನೆ ಎಂದು ನಮೂದಿಸಲಾಗಿದೆ ಎಂದರೆ ಸರಿ . ಸರ್ವೆ ನಂ. 1678, 1679, 1281 ರಲ್ಲಿ ತಾತ್ಕಾಲಿಕ ಇಮಾರತ್ತುಗಳು ಇತ್ತು. ಬೇರೆಯವರು ಅತೀಕ್ರಮಣ ಮಾಡಿದ್ದರು, ಕಾರಣ ರಿಪೇರಿ ಮಾಡಿಸಿಲ್ಲ. ಶಾರದಾರವರು ಮೊಕ್ತಾರನಾಮೆ ಕೊಟ್ಟಾಗ ಅಲ್ಲಿ ಶಾರದಾರವರಿಗೆ ಸಂಬಂಧಪಟ್ಟ ಯಾವುದೇ ಇಮಾರತ್ತುಗಳು ಇರಲಿಲ್ಲ. 5-6 ತಾತ್ಕಾಲಿಕ ಶೆಡ್ಡುಗಳು ಇದ್ದವು . ಸದರಿ ತಾತ್ಕಾಲಿಕ ಶೆಡ್ಡುಗಳು ಪ್ರತಿವಾದಿಗಳಿಗೆ ಸೇರಿದ್ದವು . ಸದರಿ ಶೆಡ್ಡುಗಳನ್ನು ತೆರವು ಗೊಳಿಸುವಂತೆ ಪಂಚಾಯತಿಯವರಿಗೆ ಅರ್ಜಿಯನ್ನು ಕೊಟ್ಟ ಬಗ್ಗೆ ನೆನಪಿಲ್ಲ . ಶೆಡ್ಡುಗಳು ಇದ್ದ ಬಗ್ಗೆ ನಾನು ಫೋಟೋ ತೆಗೆದುಕೊಂಡಿಲ್ಲ . ವಾದಿಯರು ಹಾಗೂ 1 ನೇ ಪ್ರತಿವಾದಿ ಸೇರಿ ನನಗೆ ನೀಡಿದ ಮೊಕ್ತಾರನಾಮೆ ಮೊದಲು ನೋಡಿದ್ದೇನ . ವಿಶ್ವೇಶ್ವರ ಮಾಣೇಶ್ವರ ಗೋಪಿರವರು ನೀಡಿರುವ ಮೊಕ್ತಾರನಾಮೆಯನ್ನು ನೊಡಿದ್ದೇನೆ, ಈಗ ನೆನಪಿಲ್ಲ. ಶಾರದಾ ವಿಶ್ವೇಶ್ವರ ಭಟ್ ರವರು ನೀಡಿರುವ ಮೊಕ್ತಾರನಾಮೆಯನ್ನು ನಾನು ಮೊದಲು ನೋಡಿದ್ದೇನೆ , ಈಗ ನೆನಪಿಲ್ಲ. ಮೂರು ಮೊಕ್ತಾರನಾಮೆಗಳನ್ನು ಮಾರಾಟ ಉದ್ದೇಶಕ್ಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಅಭಿವೃದ್ದಿಗೋಸ್ಕರ ಸಾರ್ವತ್ರಿಕ ಮೊಕ್ತಾರನಾಮೆ ನನಗೆ ನೀಡಿದ್ದರು ಎಂದರೆ ಸಾಕ್ಷಿ ಜಮೀನಿನ ಅಭಿವೃದ್ಧಿ ಹಾಗೂ ಮಾರಾಟಕ್ಕೆ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ . ನಾನು ಮೊಕ್ತಾರನಾಮೆಯನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ . ನಾನು ಮಾರಾಟ ಮಾಡಿರುವ ವಿಚಾರ ವಾದಿಯರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ

ಮಾಡಿದ ಯಾವುದೇ ಹಣವನ್ನು ನಾನು ಅವರಿಗೆ ನೀಡಿಲ್ಲ ಎಂದರೆ ಸರಿಯಲ್ಲ . ವಾದಿಯರ ತಾಯಿಗೆ ಹಣವನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಕಬ್ಜಾ ವಹಿವಾಟು ವಾದಿಯರ ಬಳಿ ಇತ್ತು ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಕಬ್ಜಾ ವಹಿವಾಟು ವಾದಿಗಳ ಬಳಿ ಇದ್ದರೂ ಅದನ್ನು ಅತೀಕ್ರಮಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಇವರು ಧಾರೇಶ್ವರದಲ್ಲಿ ಮೊದಲು ವಾಸವಾಗಿದ್ದರು , ನಂತರ ದಾಂಡೇಲಿಯಲ್ಲಿ 1 ನೇ ಪ್ರತಿವಾದಿಯ ಬಳಿ ವಾಸವಾಗಿದ್ದರು . ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ದಿಃ 23-12-2016 ರಂದು ವಿಲ್ ನ್ನು 12 ನೇ ಪ್ರತಿವಾದಿಯ ಹೆಸರಿಗೆ ಬರೆದಿದ್ದಾರೆ ಎಂಬ ವಿಚಾರವನ್ನು ಕೇಳಲ್ಪಟ್ಟಿದ್ದೇನು . ಶಾರದಾ ವಿಶ್ವೇಶ್ವರ ಭಟ್ ಗೋಪಿರವರು ಯಾವಾಗ ತೀರಿಕೊಂಡಿರುತ್ತಾರೆ ನೆನಪಿಲ್ಲ . ಶಾರದಾ ವಿಶ್ವೇಶ್ವರ ಭಟ್ ಗೋಪಿರವರು 12 ನೇ ಪ್ರತಿವಾದಿಗೆ ವಿಲ್ ನ್ನು ಬರೆದುಕೊಟ್ಟಿದ್ದಾರೆ ಎಂದು ತಿಳಿದುಕೊಂಡಿದ್ದೇನೆ ಎಂದು ಹೇಳುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ಶಾರದಾ ವಿಶ್ವೇಶ್ವರ ಭಟ್ ಗೋಪಿರರಿಗೆ ಮಕ್ಕಳಿಲ್ಲದ ಕಾರಣ ಅವರು ವಾದಿ ಹಾಗೂ 1 ನೇ ಪ್ರತಿವಾದಿಯನ್ನು ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ. ದಾವೆಯಲ್ಲಿ ಮಾಡಿರುವ ಎಲ್ಲಾ ಕ್ರಯ ದಸ್ತಾವೇಜುಗಳು ವಾದಿಗಳಿಗೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ. ಕ್ರಯ ದಸ್ತಾವೇಜುಗಳು ಅನುರ್ಜಿತವಾದ ಕಾರಣ ಅವರು ತಮ್ಮ ಹಕ್ಕಿನ ಅಂಶವನ್ನು ಪಡೆದುಕೊಳ್ಳಲು ಹಕ್ಕುದಾರರು ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.